ಶ್ರೀ ಎಸ್. ಕರಿಯಪ್ಪ.—ಈ ಇಗ್ಗಲೂರು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ನ್ನು ಸರ್ಕಾರ ಮಂಜೂರು ಮಾಡಿದ್ದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸಿ. ಡಬ್ಲ್ಯು. ಪಿ. ಸಿ.ಗೆ ಹೋಗಿದೆ ಇನ್ನೂ ಮಂಜೂರಾಗಿಲ್ಲ.

ಶ್ರೀ ಎಸ್. ಕರಿಯಪ್ಪ.—ದಯವಿಟ್ಟು ಪೇಪರನ್ನು ಇನ್ನೊಮ್ಮೆ ನೋಡಿ ಹೇಳಬೇಕು. ಇದು ಕಳೆದ 2-3 ತಿಂಗಳ ಹಿಂದೆ ಮಂಜೂರಾಗಿದೆ ಎಂದು ಕೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಇನ್ನೂ ಮಂಜೂರು ಆಗಿಲ್ಲ, ನನ್ನ ಬಳಿ ಇರತಕ್ಕ ಕಾಗದ ಪತ್ರಗಳಲ್ಲಿ ಇರುವುದರ ಆಧಾರದ ಮೇಲೆ ಹೇಳುತ್ತಿದ್ದೇನೆ. Advisory Committee on the multipurpose Irrigation and Food Control Project ಅದರ ಕಡೆಗೆ ಇದನ್ನು ತಾರೀಖು 2-6-1972ರಲ್ಲಿ ಕಳುಹಿಸಲಾಗಿದೆ. ಅವರು ಪರಿಶೀಲನೆ ಮಾಡಿದ ನಂತರ ಅದನ್ನು ಕ್ಲಿಯರ್ ಮಾಡಲಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ತಾವು ಆ ಸಿ. ಡಬ್ಲ್ಯು. ಪಿ. ಸಿ.ಗೆ ಇದನ್ನು ಕಳುಹಿಸಿದ್ದು ಯಾವಾಗ ? ಅವರಿಂದ ಒತ್ತಾಯ ಮಾಡಿ ಅದನ್ನು ಜಾಗ್ರತೆ ತರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ನಾವು 1971ನೇ ಜೂನ್ ತಿಂಗಳಲ್ಲಿ ಕಳುಹಿಸಿದೆವು. ಅವರಿಂದ ನಮಗೆ 1971ನೇ ಅಕ್ಟೋಬರಿನಲ್ಲಿ ಉತ್ತರ ಬಂತು. ಫೈನಲ್ ಕ್ಲಿಯರೆನ್ಸಿಗೆ ನಾವು ಮತ್ತೆ ತಾ. 22-2-1972ಕ್ಕೆ ಬರೆದಿದ್ದೇವೆ. ಅವರಿಂದ ಇನ್ನೂ ಉತ್ತರ ಬಂದಿಲ್ಲ. ಬಂದಕೂಡಲೆ ಅದನ್ನು ಎಕ್ಸ್‌ಪಿಡೈಟ್ ಮಾಡಲಾಗುವುದು.

Borewells in Imangala Hobli

315. Sri C. R. MOHAMED SAIFUDDIN (Chitradurga).—

Will the Minister for Public Works aud Electricity be pleased to state :—

(*a*) the number of borewells that have been dug in Imangala Hobli, Hiriyur Taluk ;

(*b*) the number of them fitted with hand pumps ;

(*c*) the number of pumps that are in working condition ;

(*d*) the amount spent on these borewells so far and under what scheme ;

(*e*) whether any complaint regarding defective working of these hand pumps have been received, If so, the steps taken to rectify the defects ?

Sri H. M. CHANNABASAPPA (Minister for Public Works and Electricity).—

(*a*) 104 Borewells.

(*b*) 93 Borewells.

(*c*) 80 Borewells.

(*d*) 1,59,100 to end of January 1973 under 32 R. D. (UNICEF aided Scheme).

(e) A few complaints from the people have been received, regarding the working of the hand pumps. Often the pumps go out of order mostly due to improper handling by the people. The defects have been rectified two to three times in some cases.

Action is being taken to rectify the hand pumps also which are out of order.

Sri C. R. MOHAMED SAIFUDDIN.—Ninety per cent of the bore-wells have failed and the people of the locality are put to hardship for getting drinking water. May I know what has the Government done to remove the difficulty.

† **ಶ್ರೀ ಎಚ್. ಎಂ. ಚನ್ನಬಸಪ್ಪ.**— ತಮ್ಮ ಪ್ರಶ್ನೆ ಒಪ್ಪಿದ್ದರೆ ತಾನೆ ಮುಂದೆ ಉತ್ತರ ಕೊಡುವುದಕ್ಕೆ ಸಾಧ್ಯ. 13 ಹ್ಯಾಂಡ್ ಪಂಪುಗಳು ಮಾತ್ರ ಸರಿಯಾಗಿ ಕೆಲಸಮಾಡುತ್ತಿಲ್ಲ.

Sri C. R. MOHAMED SAIFUDDIN.—I have brought this to the notice of the Chief Minister also ?

Sri H. M. CHANNABASAPPA.—I cannot agree that not even one hand pump is working.

Sri M. MALLAPPA.—Has it come to the notice of the Government that handpumps installed are of inferior quality and they are not properly working throughout the State ?

Sri H. M. CHANNABASAPPA.—It has come to my knowledge that the authority which maintains these handpumps they are also not using the pumps properly. On account of improper use of hand pumps by the people in the village level, sometimes these breakdowns do happen.

Sri V. N. PATIL.—Similar problem of breakdown of pumps is there throughout the State. Has the Government thought of having a suitable machinery to repair these pumps whenever they go out of order ?

Sri H. M. CHANNABASAPPA.—The difficulty is that even for small things they go bad. There should be an administrative machinery to look to these things. The Government will take the suggestion and see that a mobile unit is arranged where there is a cluster of pumps and see immediate attention is given.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಮೊಬೈಲ್ ಯೂನಿಟ್ ಎಷ್ಟು ದಿವಸಗಳಲ್ಲಿ ಕೊಡುವುದಕ್ಕೆ ಸಾಧ್ಯ ? ಹೋದ ವರ್ಷ ಅದನ್ನು ಕೊಡುವುದಾಗಿ ಹೇಳಿದ್ದಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಆದಷ್ಟು ಬೇಗ ಕೊಡುತ್ತೇವೆ, ಹೋದ ಸಲ ಹೇಳಿರುವುದು ಜ್ಞಾಪಕವಿಲ್ಲ.

Health Unit Dispensary at Kenkere Village

413. **Sri M. NANJE GOWDA** (Gandasi).—

Will the Minister for Health be pleased te state :—

(a) whether it is a fact that the people of round about villages have been demanding for the establishment of Health Unit Dispensary at Kenkere Village of Gandasi Hobli ;